ಬಸವಣ್ಣ ಹೊಸಖಾಂಡೆ,ಬಸವನಬಾಗೇವಾಡಿ
*ಅಂಗೈಯಲ್ಲಿ ಏನಿದೆ?*




ದುಃಖ, ನಾಚಿಕೆ ಇದ್ದಾಗ ಮುಖ, ಮಿಕ್ಕ ಸಮಯದಲ್ಲಿ ಮೊಬೈಲ್!


ಆರ್. ಮಧುಸೂದನ್. ಹಾಸನ
*ಸುಳ್ಳಿಗೂ, ಮುಳ್ಳಿಗೂ ವ್ಯತ್ಯಾಸವೇನು?*
ಮುಳ್ಳಿನಿಂದ ಚರ್ಮ ಛಿದ್ರ, ಸುಳ್ಳಿನಿಂದ ಜೀವನವೇ ಛಿದ್ರ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ನಮಗೆಲ್ಲ ಅಜ್ಜ, ತಾತ, ತಂದೆ, ತಾಯಿ ಇದ್ದಂತೆ ದೇವರುಗಳಿಗೂ ಇದ್ದಾರಾ?*
ಇದ್ದಿದ್ದರೆ ಹೀಗೆ ಯಾರಿಗೂ ಕಾಣದಂತೆ ಯುಗಗಟ್ಟಲೆ ಮನಬಂದಂತೆ ಅಲೆದುಕೊಂಡು ಇರಲು ಆಗುತ್ತಿರಲಿಲ್ಲ ಬಿಡಿ.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ನಮ್ಮ ದೇಶದಲ್ಲಿ ಲಂಚ ತೆಗೆದುಕೊಳ್ಳದವರಿರಲಿ, ಲಂಚ ಕೊಡದವರು ಯಾರಾದರೂ ಇದ್ದಾರೆಯೇ?*
ಇದ್ದಾರೆ; ಸೋನಿಯಾ ಗಾಂಧಿ!

ಗೀತಾ ಬರ್ಲ, ಬೆಂಗಳೂರು
*ಹೆಣ್ಣು, ಹಣ, ಹೆಂಡ, ಇವುಗಳ ಹಿಂದೆ ಬಿದ್ದು ಉದ್ಧಾರವಾದವರು ಯಾರು?*
ಅವುಗಳನ್ನು ಸಪ್ಲೈ ಮಾಡುವ ರೌಡಿಗಳು.

ಹಾಡ್ಯ ಬಿ. ಜಯಾನಂದ, ಮೈಸೂರು
*ಆಗ ಒಂದು ಕುಂಟು ನೆಪ ಒಡ್ಡಿ ಸೀತೆಯನ್ನು ಕಾಡಿಗೆ ಅಟ್ಟಬಹುದಾಗಿತ್ತು, ಶಕುಂತಲೆಯನ್ನು ಮರೆಯಬಹುದಾಗಿತ್ತು. ಈಗ?*



ಕೊಂಚವೇ ಗೊರಕೆ ಹೊಡೆಯಿರಿ, ನಾಯ್ಸ್ ಪಲ್ಯೂಷನ್ ಎಂಬ ಕಾರಣಕ್ಕೆ ನಿಮಗೇ ಸೋಡಾಚೀಟಿ ಬರುತ್ತದೆ!

ಗೌರಿ ಶೇಷಾದ್ರಿ, ಉತ್ತನಹಳ್ಳಿ
*ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದರೆ ಸೂಕ್ತವೋ, ಉತ್ತರ ಪಡೆದರೆ ಸೂಕ್ತವೋ?*
ಸೂಕ್ತ ಉತ್ತರ ಸಿಗುವವರೆಗೆ ಪ್ರಶ್ನೆ ಪ್ರಶ್ನೆಯಾಗಿರುವುದೇ ಸೂಕ್ತ.

ದಿಬ್ಬಳ್ಳಿ ಭರತರಾಜ್, ಸಂಡೂರು
*ನಾನು ಪರನಾರಿ ಸಹೋದರನೆಂದು ಗೊತ್ತಿದ್ದೂ ಇಲ್ಲೊಬ್ಬಳು ನನ್ನನ್ನು ನೋಡಿ ನಗುತ್ತಾಳಲ್ಲಾ...?*
ತಪ್ಪು ಅವಳದಲ್ಲ; ನಗುತ್ತಿರುವಂತೆಯೇ ಇರುವುದು ಅವಳ ಮುಖದ ಮ್ಯಾನುಫಾಕ್ಚರಿಂಗ್ ಡಿಫೆಕ್ಟ್.

ಪಿ.ಎನ್.ಶ್ರೀವತ್ಸ, ಬೆಂಗಳೂರು
*ಹೆಣ ನೋಡಿ ಬಂದ ಮೇಲೆ ತಲೆಗೆ ಸ್ನಾನ ಮಾಡಲೇಬೇಕೆ?*
ಹೆಣವೇ ಅಡಿಯಿಂದ ಮುಡಿಯವರೆಗೆ ತಣ್ಣೀರು ಸ್ನಾನ ಮಾಡಿರುವಾಗ ಬದುಕಿರುವ ನಿಮಗೆ ಸ್ನಾನ ಮಾಡಲೇನು ದಾಡಿ?

ಕುಮಾರ ಚಲವಾದಿ, ಹೊಳೆನರಸಿಪುರ
*ಗಿಣಿಗೂ, ಗಿಳಿಗೂ ಏನು ವ್ಯತ್ಯಾಸ?*
ಗಿಳಿ ಯಾವ ಏಕಾಕ್ಷರಕ್ಕೂ ಜೋಡಣೆಯಾಗುವುದಿಲ್ಲ. ಗಿಣಿ ನಾ ಸೇರಿದರೆ ಸರ್ಪ, ರಾ ಸೇರಿದರೆ ಸುಮಧುರ!

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ
*ದೇವರಿಲ್ಲದ ಗುಡಿ, ಅಜ್ಜಿಯಿಲ್ಲದ ಮನೆ ಹೇಗಿರುತ್ತದೆ?*
ಮುಂದಿನ ಚಕ್ರ ಕಳೆದುಕೊಂಡ ಆಟೋರಿಕ್ಷಾದಂತೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಕಿರುತೆರೆಯ ಧಾರಾವಾಹಿಗಳಲ್ಲಿ ಹೆಂಗಸರೇ ಖಳನಾಯಕಿಯರಾಗಿರುವುದು ಏಕೆ ಸಾರ್?*
ನಮ್ಮ ಧಾರಾವಾಹಿ ನಿರ್ದೇಶಕರು ಗೃಹಿಣಿ ಗೃಹಮುಚ್ಯತೇ ಎಂಬುದನ್ನು ಗೃಹಿಣಿ ಗೃಹ ಮುಚ್ಚತ್ತೆ ಎಂದು ತಿಳಿದಿದ್ದಾರಂತೆ!

ಪಿ.ಜೆ. ರಾಘವೇಂದ್ರ, ಮೈಸೂರು
*ಧಾರಾವಾಹಿಯಲ್ಲಿ ಯಾರಿಗೂ ಮಕ್ಕಳಾಗುವುದಿಲ್ಲ. ಏಕೆ?*
ಹನಿಮೂನ್ ದೃಶ್ಯದಿಂದ ಆರಂಭವಾಗಿ ಸಿಝೇರಿಯನ್‌ನಿಂದ ಇಂಫೆಕ್ಷನ್ ಆಗುವವರೆಗೆ ತೋರಿಸಲು ಕನಿಷ್ಠ 4 ವರ್ಷ ಬೇಕಾದೀತಂತೆ!

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ವಿಘ್ನೇಶ್ವರ ಎಂದರೆ ವಿಘ್ನಗಳ ಒಡೆಯ ಎಂದರ್ಥ. ಅಂತಹವನನ್ನು ಪೂಜಿಸುವುದರಲ್ಲೇನು ಅರ್ಥ?*
ಸೂಕ್ತವೇ; ವಿಘ್ನಗಳ ಒಡೆಯ ಎಂದರೆ ವಿಘ್ನಗಳನ್ನು ಒಡೆದು ಪೀಸ್ ಪೀಸ್ ಮಾಡುವವನು ಎಂದರ್ಥ!

## ಬಹುಮಾನಿತ ಪ್ರಶ್ನೆ

ಬಿ.ಎಸ್. ಮುಳ್ಳೂರ, ಹಲಗತ್ತಿ
*ಮನುಷ್ಯನಿಗೆ ಅಂಗಾಂಗಗಳೇ ಇಲ್ಲದಿದ್ದರೆ ಏನಾಗುತ್ತಿತ್ತು?*
ಮೆಡಿಕಲ್ ವಿದ್ಯಾರ್ಥಿಗಳಿಗೆ ಸಿಲಬಸ್ ಕಡಿಮೆಯಾಗುತ್ತಿತ್ತು!

ವಿ. ಹೇಮಂತ ಕುಮಾರ್, ಬೆಂಗಳೂರು
*ಹೆಣ್ಣಿನ ಅಂತರ್ಯ ತಿಳಿಯದೆ ಮೂರ್ಖರಾಗುವವರಿಗೆ ನಿಮ್ಮ ಸಲಹೆ?*
ತಿಳಿದು ಮುಟ್ಠಾಳರಾಗುವುದಕ್ಕಿಂತ ತಿಳಿಯದೆ ಮೂರ್ಖರಾಗಿರುವುದೇ ವಾಸಿ ಬಿಡಿ.

ಜಾಕೋಬ್ ಡಿಸೋಜ, ಕುರುವಳ್ಳಿ
*ಹೆಣ್ಣು ಎಂದರೆ ಹೇಗಿರಬೇಕು?*
ಅಟ್ ಲೀಸ್ಟ್ ಒಂದು ಆ್ಯಂಗಲ್‌ನಿಂದಾದರೂ ಹೆಣ್ಣಿನಂತೆ ಇರಬೇಕು!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಬಾರ್‌ನಲ್ಲಿ ಡ್ರಿಂಕ್ಸ್ ಕೂಲ್ ಆಗಿದ್ದರೂ ಅದನ್ನು ಹಾಟ್ ಡ್ರಿಂಕ್ಸ್ ಎಂದೇಕೆ ಕರೆಯುತ್ತಾರೆ ಸಾರ್?*



ಕುಡಿದ ನಂತರ ಅವರನ್ನು ಕೂಲ್ ಮಾಡಲು ಬಕೆಟ್‌ಗಟ್ಟಲೆ ನೀರು ಸುರಿಯಬೇಕಾದ್ದರಿಂದ!

ಎಸ್.ಎ. ಮೋಹನ್ ರಾಜು, ಶಿವಮೊಗ್ಗ
*ಜ್ಞಾನದೇಗುಲಕ್ಕೂ, ಧ್ಯಾನದೇಗುಲಕ್ಕೂ ಇವರು ವ್ಯತ್ಯಾಸವೇನು?*
ಒಂದು ಕಡೆ ಕಣ್ಣು ತೆರೆದಷ್ಟೂ ಲಾಭ, ಇನ್ನೊಂದು ಕಡೆ ಕಣ್ಮುಚ್ಚಿದಷ್ಟೂ ಲಾಭ!

ರವಿ. ಪೈ, ಹೊನ್ನಾವರ
*ಸದ್ಯದಲ್ಲಿ ಭಾರತವು ಯಾವುದರಲ್ಲಿ ಮುಂದಿದೆ?*
ಭಾ ಅಕ್ಷರದ ನಂತರದ ಅಕ್ಷರದಿಂದ ಆರಂಭವಾಗುವ ಎಲ್ಲಾ ದೇಶಗಳಿಗಿಂತಲೂ ಮುಂದಿದೆ– ನಿಘಂಟಿನಲ್ಲಿ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ದುಶ್ಯಾಸನ ಹಾಗೂ ದುರ್ಯೋಧನರಲ್ಲಿರುವ ಅಂತರವೇನು?*
ದುರ್ಯೋಧನ ಡಾನ್, ದುಶ್ಯಾಸನ ಬಾಡಿಗಾರ್ಡ್.

■ ರಾಮ್